ವಿಷಯ :- ಓಬಲೇಶ್ವರ ಮತ್ತು ನಾಗಠಾಣ ಗ್ರಾಮಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :- 95(660)

ಶ್ರೀ ಶಿವಾನಂದ ಎಸ್.ಪಾಟೀಲ್(ತಿಕೋಟ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ವಿಜಾಪುರ ತಾಲ್ಲೂಕಿನ ಓಬಲೇಶ್ವರ ಮತ್ತು ನಾಗಠಾಣ ಗ್ರಾಮಗಳಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇದುವರೆವಿಗೂ ವೈದ್ಯಾಧಿಕಾರಿಗಳನ್ನು ನೇಮಕ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಡಾ.ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-
ಅ) ಇಲ್ಲ

ಆ) ವಿಜಾಪುರ ತಾಲ್ಲೂಕು ಪ್ರಾಥಮಿಕ ಆರೋಗ್ಯ ಕೇಂದ್ರ, ಓಬಲೇಶ್ವರ, ಇಲ್ಲಿ ಎರಡು ವೈದ್ಯರ ಹುದ್ದೆಗಳು ಮಂಜೂರಾಗಿವೆ. ಒಂದು ಹುದ್ದೆಯಲ್ಲಿ ಡಾ: ಎಸ್.ಜಿ.ಪಾಟೀಲ್ ರವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಹಾಗೂ ಇನ್ನೊಂದು ಖಾಲಿ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 426 ಹೆಚ್ ಎಸ್ ಹೆಚ್ 94, ದಿನಾಂಕ: 8-12-1994 ರಲ್ಲಿ ನೇಮಕಾತಿ ಮಾಡಲಾಗಿದೆ.

ಪ್ರಾ.ಆ.ಕೇಂದ್ರ, ನಾಗಠಾಣ, ಇಲ್ಲಿ ಒಂದು ವೈದ್ಯರ ಹುದ್ದೆಯು ಮಂಜೂರಾಗಿದ್ದು, ಖಾಲಿ ಇರುವ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 134 ಹೆಚ್ ಎಸ್ ಹೆಚ್ 95, ದಿನಾಂಕ:21-3-1995 ರಲ್ಲಿ ಡಾ: ಪಕಾಲಿ ಶಶಿಕಾಂತ್ ಮುಕ್ತೇಶ್ವರ್, ಎಂಬುವವರನ್ನು ನೇಮಕಾತಿ ಮಾಡಲಾಗಿದೆ.

ವಿಷಯ :- ಪುತ್ತೂರಿನಲ್ಲಿ ಕ್ರೀಡಾಂಗಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:- 97(475)

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು):- ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ದಕ್ಷಿಣ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಪದವಿ ಪೂರ್ವ ಕಾಲೇಜಿನ ಆಟದ

ಮೈದಾನವನ್ನು ಕ್ರೀಡಾಂಗಣವಾಗಿ ಪರಿವರ್ತಿಸಲು ಆಗುವ ಅಂದಾಜು ವೆಚ್ಚವೆಷ್ಟು?

ಆ) ಕ್ರೀಡಾಂಗಣ ನಿರ್ಮಾಣಕ್ಕೆ ಸರ್ಕಾರದವರು ಮಂಜೂರು ಮಾಡಿರುವ ಹಣವೆಷ್ಟು? ಹಾಗೂ ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಅಜಯಕುಮಾರ್ ಸರ್‌ನಾಯಕ್(ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):-

ಅ) ರೂ.26.00 ಲಕ್ಷಗಳು

ಆ) ಈ ಯೋಜನೆಗಾಗಿ (ಜಿಲ್ಲಾ ಪಂಚಾಯತ್‌ನಿಂದ) ರೂ.10.00 ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ಜಿಲ್ಲಾ ಪಂಚಾಯತ್‌ನಿಂದ 2ನೇ ಕಂತಿನ ಹಣ ಮತ್ತು ಕೇಂದ್ರ ಸರ್ಕಾರದ ಅನುದಾನವು ಬಿಡುಗಡೆಯಾದ ತಕ್ಷಣ ಈ ನಿರ್ಮಾಣ ಕಾರ್ಯವನ್ನು ಪೂರ್ಣ ಗೊಳಿಸಲಾಗುವುದು.

ವಿಷಯ :- ಕರ್ನಾಟಕದಲ್ಲಿ ಆಯುರ್ವೇದ ಪದ್ದತಿಯನ್ನು ಜನಪ್ರಿಯಗೊಳಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:- 98(500)

ಶ್ರೀ ಕುಂಬ್ಳೆ ಸುಂದರ್ ರಾವ್ (ಸುರತ್‌ಕಲ್) :- ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಕರ್ನಾಟಕದಲ್ಲಿ ಇರುವ ಒಟ್ಟು ಆಯುರ್ವೇದ ಆಸ್ಪತ್ರೆಗಳು ಎಷ್ಟು?

ಆ) ಎಷ್ಟರಲ್ಲಿ ಡಾಕ್ಟರುಗಳು ಕಾರ್ಯ ನಿರ್ವಹಿಸುತ್ತಿರುವರು?

ಇ) ಎಷ್ಟು ಆಯುರ್ವೇದ ಆಸ್ಪತ್ರೆಗಳಲ್ಲಿ ಹಾಸಿಗೆ ವ್ಯವಸ್ಥೆ ಇದೆ?

ಈ) ಆಯುರ್ವೇದ ಪದ್ಧತಿ ಜನಪ್ರಿಯಗೊಳಿಸಲು ಸರ್ಕಾರ ಮಾಡಿರುವ ಯೋಜನೆಗಳೇನು?